ವಿಕ್ರಮಾರ್ಜುನ ವಿಜಯದ ವಿವರಕ್ಕೆ ಬಂದರು. ಪಂಪ ಬಳಸಿರುವ ನೆರ್ಕೊರೆವಟ್ಟೆ, ನೆರ್ಕ್ಯೊರೆವದ್ದಿ, ಕೆಸಜಿ ಕಡಿತದ ತೆರದಿಂ ಈ ಪದಗಳಿಗೆ ಡಿ.ಎಲ್.ಎನ್. ಅರ್ಥ ಹೇಳುವುದನ್ನು ಬಿಟ್ಟಿದ್ದಾರಲ್ಲ ಎಂದರು. ಅದಾಗ ತಾನೇ ಜಿ.ಪಿ. ರಾಜರತ್ನಂ ಅವರು ರನ್ನನ ಗದಾಯುದ್ಧದಲ್ಲಿ ಆರಂಭಕ್ಕೆ ಬಳಸಿದ ಆರಕ್ತ ರಕ್ತವದನ ಪದಕ್ಕೆ ಅವರು ಮಾಸಿಕ ಪತ್ರಿಕೆಯೊಂದರಲ್ಲಿ ಬರೆದಿರುವ ವ್ಯಾಖ್ಯಾನ ಸರಿತೋರುತ್ತದೆ ಎಂದರು. ಬಸಣ್ಣನವರು ಓದಿದ್ದ ಎಷ್ಟೋ, ಹಳಗನ್ನಡ ಕಾವ್ಯ ಮತ್ತು ಆಧುನಿಕ ಸಾಹಿತ್ಯವನ್ನು ನಾನು ಓದಿಯೇ ಇರಲಿಲ್ಲ. 1968ರ ಸಂಕ್ರಮಣ ಸಂಚಿಕೆಯಲ್ಲಿ ಪ್ರಕಟವಾಗಿದ್ದ ದೇವನೂರ ಮಹದೇವ ಅವರ 'ಮಾರಿಕೊಂಡವರು' ಕಥೆಯನ್ನೂ, ಅದರ ಭಾಷೆಯನ್ನೂ ಕುರಿತು ಮಾತಾಡಿದರು. ಇಷ್ಟಲ್ಲದೆ ಪತ್ರಿಕೆಗಳಲ್ಲಿ ಆಯಾ ವಾರ, ತಿಂಗಳು ಪ್ರಕಟವಾದ ಕಥೆ, ಕಾವ್ಯವನ್ನು ಅದರ ಶೀರ್ಷಿಕೆಯನ್ನೂ ಪ್ರಸ್ತಾಪಿಸಿ ಅದು ಚೆನ್ನಾಗಿತ್ತು, ಇದು ಮನಸ್ಸಿಗೆ ತಟ್ಟಲಿಲ್ಲ ಎನ್ನುತ್ತಿದ್ದರು. ಇಷ್ಟೆಲ್ಲ ಮಾತನಾಡಿ ನಾನೊಬ್ಬ ವ್ಯಾಪಾರಿ, ಸರಿಯಾಗಿ ಸಾಹಿತ್ಯ ಕುರಿತು ಮಾತಾಡಲು ಬರುವುದಿಲ್ಲ ನೋಡಿ ಎಂದರೆ ಕೃಷ್ಣಶಾಸ್ತ್ರಿಗಳೂ ಹಾಗೆಯೇ ತಮಗೂ ಏನೂ ತಿಳಿಯುವುದಿಲ್ಲ ಎನ್ನುತ್ತಿದ್ದರು. ಈ ಬಯಲು ವಿಶ್ವವಿದ್ಯಾಲಯ ಪ್ರಾಧ್ಯಾಪಕರ 'ತಿಳಿಯುವುದಿಲ್ಲ' ಎಂಬ ಮಾತಿನಿಂದಲೇ ನನ್ನ ತಿಳಿವಳಿಕೆ ಆರಂಭವಾಯಿತು.

★★★

1974ರ ಹೊತ್ತಿನಲ್ಲಿ ನಾನು ಚಳ್ಳಕೆರೆ ಸೇರಿದ ಮೇಲೆ ನನಗೆ ಬೆಂಗಳೂರು, ಮೈಸೂರು ವಲಯದ ಸಾಹಿತ್ಯ ಸೃಷ್ಟಿ ಮತ್ತು ಲೇಖಕರ ಸಂಪರ್ಕ ತಪ್ಪಿ ಹೋಯಿತು. ತಪ್ಪಿ ಹೋಯಿತು ಎಂಬುದಿರಲಿ, ಆ ಮೊದಲೂ ಇರಲಿಲ್ಲವಲ್ಲ! ಇಷ್ಟರ ಮೇಲೆ ಬೆಂಗಳೂರಲ್ಲಿ ಸ್ನಾತಕೋತ್ತರ ಪದವಿ ಓದುತ್ತಿದ್ದ ಕಾಲಕ್ಕೆ ಇಂಗ್ಲಿಷ್ ಹಿನ್ನೆಲೆಯ ನವ್ಯ ಬರೆಹದ ಉರುಬು ಹೆಚ್ಚಿದ್ದಿತು. ನಾನು ಚಿದಾನಂದಮೂರ್ತಿಯವರ ವಿದ್ಯಾರ್ಥಿಯಾಗಿ ಓದಿದ್ದು ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಹಳಗನ್ನಡ ಮತ್ತು ಶಾಸನಸಂಗತಿಗಳು. ಅದೇ ಸಂದರ್ಭಕ್ಕೆ ಬರೆಯಲ್ಪಟ್ಟು ಪ್ರಚಾರ ಪಡೆದಿದ್ದ ಅನಂತಮೂರ್ತಿಯವರ 'ಸಂಸ್ಕಾರ', ಗಿರಿ ಅವರ 'ಗತಿಸ್ಥಿತಿ', ಕಾರ್ನಾಡರ 'ತುಘಲಕ್', ಕಂಬಾರರ ಜನಪದ ಹಿನ್ನೆಲೆಯ ನಾಟಕಗಳು ಇವನ್ನೆಲ್ಲ ಮತ್ತೆ ಓದುವ, ನೋಡುವ ಅವಕಾಶ ಚಳ್ಳಕೆರೆಗೆ ಬಂದ ಮೇಲೆ ನಿಂತೇಹೋಯಿತು. ಆಧುನಿಕ ಸೃಜನಶೀಲ ಕೃತಿಗಳಾಗಲಿ, ವಿಮರ್ಶಾ ಮಾದರಿಗಳಾಗಲಿ ನನ್ನ ಅರಿವಿಗೆ ಬರಲೇ ಇಲ್ಲ. ನಾನು ಬರೆಯಬಹುದಾದ ಸಾಹಿತ್ಯ ಮಾರ್ಗ ಯಾವುದೆಂದು ಹೊಳೆಯುವ ಸಾಧ್ಯತೆಯೂ ಇರಲಿಲ್ಲ. ಜಾನಪದ ಜಗತ್ತಿನಲ್ಲಿ ಅಡ್ಡಾಡುತ್ತಾ ನಾನು ಒಬ್ಬ ಜನಪದ ವಕ್ತೃವೇ ಆಗಿ ಹೋಗಿದ್ದೆ. ನಾನು ಏನಾದರೂ ಬರೆದರೆ ಈ ನವ್ಯದ ಪ್ರಾಯಗಾಲದಲ್ಲಿ ಮುಪ್ಪು ಅಡರಿದ ಜನಪದರ ಸಾಹಿತ್ಯವನ್ನು ಓದುವವರುಂಟೇ, ಕೇಳುವವರುಂಟೇ ಎನಿಸುತ್ತಿತ್ತು.

ಒಮ್ಮೆ ನನ್ನ ಜನಪದ ಓಡಾಟದ ವೇಳೆ ಭೇಟಿಯಾದ ಕರ್ನಾಟಕ, ಆಂಧ್ರದ ಗಡಿಯ ಅಮರಾಪುರದ ನರಸಜ್ಜನನ್ನು ಕುರಿತು ಒಂದು ಪುಟ್ಟ ಲೇಖನ ಬರೆದು, ಆಗ ಜನಪ್ರಿಯತೆಯ, ವೈಚಾರಿಕತೆಯ ಮತ್ತು ಜಾಣ–ಜಾಣೆಯರ ಮಾತಾಗಿದ್ದ ಲಂಕೇಶ್ ಪತ್ರಿಕೆಗೆ ಕಳಿಸಿದೆ. ಲೇಖನ ವಿವರವೆಂದರೆ, ನರಸಜ್ಜ ಕತ್ತೆ ಕಾಯುವ ಕಾಯಕದವನು. ಒಳ್ಳೆಯ ಕತೆಗಾರನಾಗಿದ್ದ. ಅವನನ್ನು ಹುಡುಕಿಕೊಂಡು ನಾನೂ ಮಿತ್ರರಾದ ಕಲಮರಹಳ್ಳಿ ಈಶ್ವರಪ್ಪನವರೂ ಹೊರಟೆವು. ಅವನ ಕತ್ತೆಗಳು ವೇದಾವತಿ ತೀರದಲ್ಲಿ ಎತ್ತೆತ್ತಲೋ ಮೇಯುತ್ತಿದ್ದವು. ಆದರೆ ಅಲ್ಲೆಲ್ಲಿಯೂ ನರಸಜ್ಜ ಇಲ್ಲ. ಸುತ್ತಿ ಸುತ್ತಿ, ಹೈರಾಣಾದೆವು. ನರಸಜ್ಜನಾದರೋ ಒಂದು ಕಪಿಲೆಬಾವಿಯ ಒಳಗೆ